ವಿಜಯ ಕರ್ನಾಟಕ

14/5/2001

2

# ಇಂದು ನೈಸರ್ಗಿಕ ಕಾರ್ಯಾಗಾರ ಮುಕ್ತಾಯ

ಕೊಪ್ಪಳ.ಮೇ 14-ನೈಸರ್ಗಿಕ ಸಂಪನ್ಮೂಲಗಳ ನಿರಂತರ ರಕ್ಷಣೆ ಮತ್ತು ಉಪಯೋಗದ ಕುರಿತು ತಾಲೂಕಿನ ಬಿಕನಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಕಾರ್ಯಾಗಾರದ ಮುಕ್ತಾಯ ಸಮಾರಂಭವು ನಾಳೆ ದಿ. 15 ರಂದು ನಡೆಯಲಿದೆ. ನಗರದ ಸಂಪರ್ಕ ಸಂಸ್ಥೆ(ಪರಿಸರ) ಸಂಘಟಿಸಿರುವ ಕಾರ್ಯಾಗಾರದಲ್ಲಿ ಅಭಿವೃದ್ಧಿ ಹೊಂದಿರುವ ರೈತರು ಹಾಗೂ ಸಂಸ್ಥೆಯವರು ಗ್ರಾಮದ ರೈತರಿಗೆ ಸ್ಥಳೀಯ ಸಂಪನ್ಮೂಲಗಳ ನಿರಂತರ ರಕ್ಷಣೆ ಮತ್ತು ನಿರ್ವಹಣೆ ಕುರಿತು ತಿಳವಳಿಕೆ, ಮೂಡಿಸಲಾಗುವುದು.

ಈ ಕಾರ್ಯಾಗಾರದಲ್ಲಿ ಬಿಕನಹಳ್ಳಿ ಗ್ರಾಮದ ರೈತರು, ಮಹಿಳೆಯರು ಮತ್ತು ಸಂಪರ್ಕ ಸಂಸ್ಥೆಯವರು ಭಾಗವಹಿಸಿದ್ದರು ಎಂದು ಸಂಸ್ಥೆಯ ಮುಖ್ಯಸ್ಥ ಜಯಶೀಲನ್ ತಿಳಿಸಿದ್ದಾರೆ.